

ಟ್ರಾಫಿಕ್ ಜಂಜಡಕ್ಕೆ ಬೇಸತ್ತು ವಾಹನದ ಮೇಲೆ ಒರಗಿರುವ ಸವಾರ

ಚಿತ್ರ: ಎಂ.ಎಸ್. ಮಂಜುನಾಥ್

ನಮ್ಮ ಆಯುಸ್ಸಿನ ಕುರಿತಂತೆ ಒಂದು ಪುಟ್ಟ ಲೆಕ್ಕಾಚಾರ. ವ್ಯಕ್ತಿಯೊಬ್ಬನಿಗೆ ಐವತ್ತು ವರ್ಷ ವಯಸ್ಸು ಎಂದಿಟ್ಟುಕೊಳ್ಳಿ. ಈ ಐವತ್ತು ವರ್ಷಗಳಲ್ಲಿ ಸುಮಾರು ಒಂದು ವರ್ಷದಷ್ಟು ಆಯುಸ್ಸನ್ನು ಯಾರಾದರೂ ಅಳಿಸಿಹಾಕಿದರೆ ಹೇಗಿರುತ್ತದೆ? ಯಾರಾದರೂ ಹೀಗೆ ಆಯುಸ್ಸು ಅಳಿಸಿಹಾಕಲು ಸಾಧ್ಯವೇ ಎನ್ನಬೇಡಿ. ನೀವು ನಗರಗಳಲ್ಲಿ ವಾಸಿಸುತ್ತಿರುವ ಉದ್ಯೋಗಿಗಳಾದರೆ ಖಂಡಿತವಾಗಿಯೂ ಈ ಲೆಕ್ಕಾಚಾರದಲ್ಲಿ ಹುರುಳಿದ್ದೇ ಇದೆ. ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದರೂ, ನಗರಕ್ಕೆ ಬಂದಾಗ ಕೆಲವು ನಿಮಿಷಗಳ ಆಯುಸ್ಸನ್ನಾದರೂ ಬಲಿಕೊಟ್ಟಿರುತ್ತೀರಿ. ಹಾಗಾದರೆ, ನಮ್ಮ ಆಯುಸ್ಸಿನ ಜೊತೆಗೆ ಹೀಗೆ ಕಣ್ಣಾಮುಚ್ಚಾಲೆ ಆಡುತ್ತಿರುವುದು ಯಾರು ಎಂದಿರಾ? ಅದು ವ್ಯಕ್ತಿಯಲ್ಲ, ನಾವೇ ಸೃಷ್ಟಿಸಿಕೊಂಡ ವ್ಯವಸ್ಥೆ – ಟ್ರಾಫಿಕ್ ಜಾಮ್!

ಮನೆಯಿಂದ ನೌಕರಿಯ ಸ್ಥಳಕ್ಕೆ, ಅಲ್ಲಿಂದ ಮನೆಗೆ ಪ್ರತಿನಿತ್ಯ ಪಯಣಿಸುವವರು ಟ್ರಾಫಿಕ್ ಜಾಮ್‌ನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಹದಿನೈದು, ಇಪ್ಪತ್ತು ನಿಮಿಷಗಳ ದಾರಿಯನ್ನು ಕ್ರಮಿಸಲು ಕೆಲವೊಮ್ಮೆ ಒಂದೆರಡು ತಾಸೇ ಹಿಡಿಯುತ್ತದೆ. ಬೆಳಗ್ಗೆ ಟ್ರಾಫಿಕ್ ಚಕ್ರವ್ಯೂಹಗಳನ್ನು ಹಾದು ಆಫೀಸಿಗೆ ಬರುವ ವೇಳೆಗೆ ಯುದ್ಧವೊಂದನ್ನು ಗೆದ್ದಂತಹ ಸ್ಥಿತಿ. ಸಂಜೆ ಕಚೇರಿಯಿಂದ ಮನೆಗೆ ಮರಳಿದರೆ ಕದನ ವಿರಾಮವನ್ನು ಘೋಷಿಸಿದ ನಿರಾಳಭಾವ. ಇನ್ನು ಊರು ಸುತ್ತುವುದೇ ಉದ್ಯೋಗದ ಭಾಗವಾದವರ ಪರಿಸ್ಥಿತಿಯನ್ನು ಕೇಳುವುದೇ ಬೇಡ. ಅನುದಿನದ ಈ ಟ್ರಾಫಿಕ್ ಸಂಕಟ ಇದೆಯಲ್ಲ – ಅದು ನಿಧಾನವಿಷದಂತೆ ನಮ್ಮನ್ನು ಕಾಡುತ್ತಿದೆ.

'ದೂರದಿಂದಲೇ ಜೀವ ಹಿಂಡುತಿದೆ ಕಾಣದೊಂದು ಹಸ್ತ' ಎಂದು ಪರಿತಪಿಸುತ್ತ ನಿರಾಳವಾಗುವಂತಿಲ್ಲ. ಈ ಲೆಕ್ಕಾಚಾರ ನೇರವಾಗಿದೆ, ಸರಳವಾಗಿಯೇ ಇದೆ. ಬೆಳಗ್ಗೆ ಅರ್ಧ ತಾಸು, ಸಂಜೆ ಅರ್ಧ ತಾಸಿನ ಸಮಯವನ್ನು ಟ್ರಾಫಿಕ್‌ನಲ್ಲಿ ಕಳೆಯುತ್ತೇವೆ ಎಂದಿಟ್ಟುಕೊಂಡರೆ, ದಿನಕ್ಕೆ ಒಂದು ಗಂಟೆಯ ಸಮಯ ರಸ್ತೆಯ ವಿಷವೃತ್ತಗಳಲ್ಲಿ ಸಿಲುಕಿಕೊಂಡಿರುತ್ತೇವೆ ಎಂದಾಯಿತು. ರಜೆ ದಿನಗಳನ್ನು ಹೊರತುಪಡಿಸಿ, ತಿಂಗಳಿಗೆ 26 ದುಡಿಮೆಯ ದಿನಗಳು ಎಂದಾದರೆ, 26 ಗಂಟೆಗಳ ಕಾಲ ಟ್ರಾಫಿಕ್ ಜಾಮ್‌ಗೆ ನಮ್ಮನ್ನು ಒಪ್ಪಿಸಿಕೊಂಡಿರುತ್ತೇವೆ. ವರ್ಷದ ಲೆಕ್ಕದಲ್ಲಿದು 312 ಗಂಟೆ. ಅಂದರೆ, ತಿಂಗಳಲ್ಲಿ ಒಂದು ದಿನಕ್ಕೂ ಹೆಚ್ಚು ಸಮಯ ಟ್ರಾಫಿಕ್ ಪಾಲು! ಹೀಗೆ ಕಲ್ಪಿಸಿಕೊಳ್ಳುವುದೇ ಅಸಹನೀಯವಲ್ಲವೇ? ಸ್ವಲ್ಪ ಇರಿ, ಲೆಕ್ಕಾಚಾರವಿನ್ನೂ ಮುಗಿದಿಲ್ಲ. ತಿಂಗಳಿಗೆ ಕನಿಷ್ಠ 1 ದಿನದ ಸರಾಸರಿ ಹಿಡಿದರೂ, ವರ್ಷಕ್ಕೆ 12 ದಿನ. ಹೀಗೆ ಸುಮಾರು 30 ವರ್ಷಗಳ ಕಾಲ ದುಡಿಯುತ್ತೇವೆ ಎಂದುಕೊಂಡರೆ, 360 ದಿನಗಳು! ಅಂದರೆ, ಸುಮಾರು ಒಂದು ವರ್ಷದ ಅವಧಿಯನ್ನು ಟ್ರಾಫಿಕ್ ಜಾಮ್ ನುಂಗಿರುತ್ತದೆ. ಮತ್ತೂ ಆಳಕ್ಕೆ ಹೋಗಿ ಇರುಳುಗಳನ್ನು ಹೊರತುಪಡಿಸಿ ಹಗಲನ್ನಷ್ಟೇ ಲೆಕ್ಕಕ್ಕೆ ಹಿಡಿಯುವುದಾದರೆ, ಈ ವರ್ಷದ ಅವಧಿ ದ್ವಿಗುಣವಾಗುತ್ತದೆ. ಅಂದರೆ, ನಮ್ಮ ಆಯುಸ್ಸಿನಲ್ಲಿ 2 ವರ್ಷಗಳಷ್ಟು ಅಮೂಲ್ಯ ಅವಧಿ ಟ್ರಾಫಿಕ್ ಜಾಮ್‌ನಲ್ಲಿ ಸೋರಿಹೋದಂತಾಯಿತು! ಎಪ್ಪತ್ತು ವರ್ಷದ ವ್ಯಕ್ತಿಯೊಬ್ಬ ಸುಮಾರು ಐವತ್ತು ವರ್ಷಗಳ ಕಾಲ ಹೀಗೆ ಓಡಾಡುತ್ತಾನೆ ಎಂದುಕೊಂಡರೆ, ಆ ವ್ಯಕ್ತಿಯ ಜೀವನದ ಸುಮಾರು ನಾಲ್ಕು ವರ್ಷಗಳ ಕಾಲ ಟ್ರಾಫಿಕ್ ದಟ್ಟಣೆಯ ಪಾಲಾಗಿರುತ್ತದೆ.

ಲೆಕ್ಕವನ್ನು ಮತ್ತೂ ಬೆಳೆಸಲಿಕ್ಕೆ ಸಾಧ್ಯವಿದೆ. ಟ್ರಾಫಿಕ್ ಜಾಮ್ ಎನ್ನುವುದು ವಿಷವೃತ್ತಗಳ ಒಂದು ಸರಣಿ. ಒಂದೆಡೆ ವಾಯುಮಾಲಿನ್ಯ, ಇನ್ನೊಂದೆಡೆ ಶಬ್ದಮಾಲಿನ್ಯ. ನಿರಂತರವಾಗಿ ಈ ಮಾಲಿನ್ಯಯುಗಳಕ್ಕೆ ಮೈಮನಗಳನ್ನು ಒಡ್ಡಿಕೊಳ್ಳುವುದರಿಂದ ಉಂಟಾಗುವ ಆರೋಗ್ಯ ಸಮಸ್ಯೆಯೂ ಜೀವನಚಕ್ರದ ಮೇಲೆ ಪರಿಣಾಮ ಬೀರುತ್ತದೆ. ಇದರಿಂದಾಗಿ ಮತ್ತೆ ಕಳೆಯುವ ಲೆಕ್ಕ ಆರಂಭ. ಒಂದಂತೂ ನಿಜ, ವಾಹನಗಳ ದಟ್ಟಣೆಯಿಂದ ಉಂಟಾಗುವ ಟ್ರಾಫಿಕ್ ಜಾಮ್ ನಮ್ಮ ಬದುಕಿನ ಲೆಕ್ಕಾಚಾರವನ್ನೇ ಬುಡಮೇಲು ಮಾಡಿದೆ. ಇದು ಏಕಮುಖ ಗಣಿತ; ಕೂಡುವ ಲೆಕ್ಕ ಇಲ್ಲಿ ನಗಣ್ಯ.

